ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಗೊಟ್ಟಿಗೆರೆ ವಾರ್ಡ್ ಸಂಖ್ಯೆ-194,</u>

<u>ವಾರ್ಡ್ ಕಛೇರಿಯಲ್ಲಿ ದಿನಾಂಕ: 06-08-2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.</u>

## ಹಾಜರಿದ್ದವರು

1. ಶ್ರೀ.ಎನ್.ಶ್ರೀನಿವಾಸ, ಕಂದಾಯ ಅಧಿಕಾರಿ (ಅಂಜನಾಪುರ ವಿಭಾಗ) ಹಾಗೂ ನೋಡಲ್ ಅಧಿಕಾರಿಗಳು, ಗೊಟ್ಟಿಗೆರೆ, ವಾರ್ಡ್ ಸಮಿತಿ, ಬೊಮ್ಮನಹಳ್ಳಿ ವಲಯ, ಬೆಂಗಳೂರು.
2. ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು-ವಾರ್ಡ್ ನಂ 194 ಗೊಟ್ಟಿಗೆರೆ.
3. ವೈದ್ಯಾಧಿಕಾರಿಗಳು ಗೊಟ್ಟಿಗೆರೆ ವಾರ್ಡ್,
4. ಸಹಾಯಕ ಕಂದಾಯ ಅಧಿಕಾರಿ (ಅಂಜನಾಪುರ ಉಪವಿಭಾಗ)
5. ಕಂದಾಯ ಪರಿವೀಕ್ಷಕರು ವಾಡ್‌ನಂ 194
6. ಅರಣ್ಯ ಇಲಾಖೆ ಸಿಬ್ಬಂದಿ,
7. ತೋಟಗಾರಿಕೆ ಇಲಾಖೆಯ ಸಿಬ್ಬಂದಿ
8. ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ)
9. ಸಹಾಯಕ ಅಭಿಯಂತರರು (ಎಸ್.ಡ್ಲ್ಯೂ.ಡಿ)
10. ಸಹಾಯಕ ಅಭಿಯಂತರರು (ಬೆಸ್ಕಾಂ)
11. ಅಧ್ಯಕ್ಷರು, ಪರಿವರ್ತನ ಬಡಾವಣೆ, ಗೊಟ್ಟಿಗೆರೆ
12. ಅಧ್ಯಕ್ಷರು, ಹೆಚ್.ಎಮ್ ವರ್ಲ್ಡ್ ಸಿಟಿ. ಗೊಟ್ಟಿಗೆರೆ
13. ಅಧ್ಯಕ್ಷರು, ಜೆ.ಪಿ.ನಗರ 9ನೇ ಹಂತ. ಗೊಟ್ಟಿಗೆರೆ
14. ಅಧ್ಯಕ್ಷರು, ಪವಮಾನ ನಗರ, ಗೊಟ್ಟಿಗೆರೆ
15. ಅಧ್ಯಕ್ಷರು, ಸೌತ್ ಅವೆನ್ಯೂ, ಗೊಟ್ಟಿಗೆರೆ,
16. ಅಧ್ಯಕ್ಷರು, ಸಾರಥಿ ನಗರ, ಗೊಟ್ಟಿಗೆರೆ

**ದಿನಾಂಕ: 06-08-2022 ರಂದು ಬೆಳಗ್ಗೆ 11:00 ಘಂಟೆಗೆ ನಡೆಸಲಾದ ವಾರ್ಡ್ ಸಮಿತಿ ಸಭೆಯಲ್ಲಿ ಅಧ್ಯಕ್ಷರು ಎಲ್ಲರನ್ನು ಸ್ವಾಗತಿಸಿದರು ಹಾಗೂ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿಲಾಯಿತು.**

**1. ಸಾರ್ವಜನಿಕರಲ್ಲಿ ವ್ಯಾಪಕವಾಗಿ ಸೊಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತ ಬಗ್ಗೆ.**

ವೈದ್ಯಾಧಿಕಾರಿಗಳು, ಪಿ.ಹೆಚ್.ಸಿ, ಗೊಟ್ಟಿಗೆರೆ ರವರು ಮಾತನಾಡುತ್ತಾ ಪಾಲಿಕೆಯ ವ್ಯಾಪ್ತಿಯಲ್ಲಿ ಕೋವಿಡ್-19 ಕ್ಲಸ್ಟರ್‌ಗಳು ಕಂಡುಬರುತ್ತಿದ್ದು, ಎಲ್ಲಾ ಸಾರ್ವಜನಿಕರು ಕೋವಿಡ್-19 ಹರುಡುವಿಕೆಯನ್ನು ತಡೆಗಟ್ಟಲು ಕಡ್ಡಾಯವಾಗಿ ಮಾಸ್ಕ್, ಸ್ಯಾನಿಟೈಝರ್ ಹಾಗೂ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದನ್ನು ಪಾಲಿಸಲು ಸೂಚಿಸಿರುತ್ತಾರೆ ಹಾಗೂ, ಕಾಲರಾ, ಮಂಕಿಫಾಕ್ಸ್, ಡೆಂಗ್ಯೂ, ರೋಗಗಳ ಬಗ್ಗೆ ತಿಳಿಸುತ್ತಾ ಮುಂಜಾಗ್ರತೆ ಕ್ರಮಕೈಗೊಳ್ಳುವ ಬಗ್ಗೆ ಸಭೆಗೆ ತಿಳಿಸಿದರು.

**2. ವಾರ್ಡ್ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಂದ ಅನುಷ್ಠಾನಗೊಳ್ಳುತ್ತಿರುವ ಕುಡಿಯುವ ನೀರು ಹಾಗೂ ಒಳಚರಂಡಿ ಕಾಮಗಾರಿಗಳ ಪ್ರಗತಿ ಮತ್ತು ಸಂಬಂಧಿಸಿದ ವಿಷಯಗಳ ಬಗ್ಗೆ.**

ಸೌತ್ ಅವೆನ್ಯೂ ಬಡಾವಣೆಯಲ್ಲಿ ಕಾವೇರಿ ಪೈಪ್‌ಲೈನ್‌ನಲ್ಲಿ ನೀರು ಸೋರಿಕೆಯಾಗುತ್ತಿದ್ದು ತಕ್ಷಣವೇ ರಸ್ತೆ ಹಗೆಯುತ್ತಿರುವುದು ಕಂಡುಬಂದಿದ್ದು ಇದ್ದರಿಂದ ಸಾರ್ವಜನಿಕರ ಹಣ ವ್ಯರ್ಥವಾಗುತ್ತಿರುವುದು ಕಂಡುಬಂದಿರುವ ಬಗ್ಗೆ ಅನೇಕ ದೂರುಗಳು ಬಂದಿದ್ದು ರಸ್ತೆ ಹಗೆಯುವುದಕಿಂತ ಮುಂಚಿತವಾಗಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ನಡೆಸುವ ಕಾಮಗಾರಿಗಳನ್ನು ವಿಶಿಷ್ಠ ವಿವರಣೆಯಂತೆ ನಡೆಸಲು ಹಾಗೂ ಬಿ.ಬಿ.ಎ.ಪಿ ಇಂಜನಿಯರ್‌ಗಳ ಜೊತೆ ಸಮನ್ವಯ ಸಾಧಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು

(ಮು.ತಿ.ನೋ)

Scanned with CamScanner

ಅಗತ್ಯ ಕ್ರಮಕೈಗೊಳ್ಳಬೇಕಾಗಿ ಅಧ್ಯಕ್ಷರು ಸೌತ್ ಅವೆನ್ಯೂರವರು ಕೋರಿರುತ್ತಾರೆ ಹಾಗೂ 194–ಗೊಟ್ಟಿಗೆರೆ ವಾರ್ಡ್‌ಗೆ ಕಾವೇರಿ ನೀರು ಯಾವಾಗ ಬರುತ್ತದೆ ಎಂಬುದನ್ನು ಸಹ ತಿಳಿಸಲು ಕೋರಿದರು.

ಈ ಸಂಬಂಧ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಮಾತನಾಡುತ್ತಾ ಬಿ.ಬಿ.ಎಂ.ಪಿ ಯ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಲಾಗುವುದೆಂದು ತಿಳಿಸಿದರು ಹಾಗೂ ಕಾವೇರಿ ನೀರು ಸರಬರಾಜು ಬಗ್ಗೆ ಇನ್ನೂ ಕಾಲವಕಾಶಬೇಕಾಗಿರುತ್ತದೆ ಎಂದು ಸಹ ತಿಳಿಸಿದರು.

**3. ಘನತ್ಯಾಜ್ಯ ನಿರ್ವಹಣೆಯ ಬಗ್ಗೆ.**

1. ಗೊಟ್ಟಿಗೆರೆ ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಹೆಚ್ಚುವರಿ ವಾಹನಗಳ ಅವಶ್ಯಕತೆ ಇರುವುದರಿಂದ ಹೆಚ್ಚುವರಿ ವಾಹನಗಳ ಬಿಡುಗಡೆಗಾಗಿ ಮೇಲಾಧಿಕಾರಿಗಳಿಗೆ ಪತ್ರ ಬರೆಯಲು ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) ರವರಿಗೆ ಸೂಚಿಸಲಾಯಿತು.
2. ಪೌರ ಕಾರ್ಮಿಕರಿಗೆ ಕೈ ಚೀಲ ಮತ್ತು ಕಾಲಿಗೆ ಶೂ ಗಳನ್ನು ಉಪಯೋಗಿಸುವಂತೆ ತಿಳುವಳಿಕೆ ನೀಡಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು.

4. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆ:

1) ವಾರ್ಡ್ ನಂ 194–ಗೊಟ್ಟಿಗೆರೆ ವಾರ್ಡ್ ವ್ಯಾಪ್ತಿಯಲ್ಲಿ ಹಾಳಾಗಿರುವ ಬೀದಿ ದೀಪಗಳನ್ನು ದುರಸ್ಥಿಪಡಿಸಲು ಕೋರಿರುತ್ತಾರೆ. ಈ ಸಂಬಂಧ ಬೀದಿ ದೀಪ ನಿರ್ವಹಣಾ ಗುತ್ತಿಗೆದಾರರು ಕೂಡಲೇ ದುರಸ್ಥಿ ಕಾರ್ಯವನ್ನು ಕೈಗೊಳ್ಳಲು ಸೂಚಿಸಲಾಯಿತು.
2) ಗೊಟ್ಟಿಗೆರೆ ವಾರ್ಡ್ ವ್ಯಾಪ್ತಿಯಲ್ಲಿ ಸ್ಟ್ರೀಟ್‌ಲೈಟ್ ಪೋಲ್ಗಳ ಹತ್ತಿರ ಮರದ ಕೊಂಬೆಗಳು ಹಾಗೂ ಎಲೆಗಳು ಅಡ್ಡಲಾಗಿ ಬೆಳಕಿನ ಪ್ರಸರಣಕ್ಕೆ ಅಡ್ಡಿಯಾಗುತ್ತಿದ್ದು ಸದರಿ ಕೊಂಬೆಗಳನ್ನು ಹಾಗೂ ಎಲೆಗಳನ್ನು ಟ್ರಿಮ್ ಮಾಡಿ ಬೆಳಕಿನ ಪ್ರಸರಣಕ್ಕೆ ಅನುವು ಮಾಡಿಕೊಡುವಂತೆ ಸಹಾಯಕ ಅಭಿಯಂತರರು ಬೀದಿ ದೀಪ ನಿರ್ವಹಣೆರವರಿಗೆ ಸೂಚಿಸಲಾಯಿತು.

5. ಪಾರ್ಕ್‌ಗಳ ನಿರ್ವಹಣೆ:–

ಗೊಟ್ಟಿಗೆರೆ ವಾರ್ಡ್ ವ್ಯಾಪ್ತಿಯ ಸ್ಕೈಲೈನ್ ಅಪಾರ್ಟ್‌ಮೆಂಟ್ ಎದುರುಗಡೆ ಇರುವ ಪಾರ್ಕನ್ನು ಸ್ವಚ್ಛಗೊಳಿಸುವಂತೆ ಸಭೆಯಲ್ಲಿ ಹಾಜರಿದ್ದ ತೋಟಗಾರಿಕೆ ಇಲಾಖೆಯ ಸಿಬ್ಬಂದಿಗೆ ಸೂಚಿಸಲಾಯಿತು.

5. ಕೆರೆಗಳ ನಿರ್ವಹಣೆ:

ಗೊಟ್ಟಿಗೆರೆ ವಾರ್ಡ್‌ನ, ಗೊಟ್ಟಿಗೆರೆ ಗ್ರಾಮದಲ್ಲಿ ಇರುವ ಕೆರೆಯಲ್ಲಿ ಹುಲ್ಲು ಮತ್ತು ಗಿಡ ಗಂಟೆಗಳು ಬೆಳೆಯುತಿದ್ದು ಸದರಿ ಕೆರೆಯನ್ನು ಸ್ವಚ್ಛವಾಗಿಡಲು ಕ್ರಮವಹಿಸುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆ ವಿಭಾಗ) ರವರಿಗೆ ಸೂಚಿಸಲಾಯಿತು.

75ನೇ ವರ್ಷದ ಸ್ವಾತಂತ್ರ ಮಹೋತ್ಸವ ಹಿನ್ನಲೆಯಲ್ಲಿ ದೇಶದಾದ್ಯಂತ ದಿನಾಂಕ: 13, 14 & 15 ರಂದು ಪ್ರತಿ ಕಛೇರಿ ಮತ್ತು ಮನೆಗಳ ಮೇಲೆ ನಮ್ಮ ರಾಷ್ಟ್ರಧ್ವಜ ಹಾರಿಸುವ ಬಗ್ಗೆ ಮಾನ್ಯ ಕರ್ನಾಟಕ ಸರ್ಕಾರವು ಆದೇಶಿಸಿರುವುದರಿಂದ ಸಭೆಯಲ್ಲಿ ಹಾಜರಿದ್ದ ಎಲ್ಲಾರಿಗೂ ರಾಷ್ಟ್ರಧ್ವಜ ಹಾರಿಸಲು ತಿಳಿಸಲಾಯಿತು.

ಈ ಮೇಲೆ ತಿಳಿಸಿರುವ ಎಲ್ಲಾ ವಿಷಯ/ಸಮಸ್ಯೆಗಳನ್ನು ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

6/8/2022
ಅಧ್ಯಕ್ಷರು/ನೋಡಲ್ ಅಧಿಕಾರಿಗಳು
ಹಾಗೂ ಕಂದಾಯ ಅಧಿಕಾರಿಗಳು
ಕಂದಾಯ ಅಧಿಕಾರಿ
ಅಂಜನಾಪುರ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:–

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
3. ಉಪ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
5. ಅಧೀಕ್ಷಕ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.

(ಮು.ತಿ.ನೋ.)

Scanned with CamScanner

6. ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ, ಗೊಟ್ಟಿಗೆರೆ ರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, BWSSB, ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸದೆ.
8. ಸಹಾಯಕ ನಿರ್ದೇಶಕರು (ಪಶುಪಾಲನೆ), ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸದೆ.
9. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಬೊಮ್ಮನಹಳ್ಳಿ) ವಲಯ ಬಿಬಿಎಂಪಿ.
10. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ.
11. ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು, ಬಿಬಿಎಂಪಿ
12. ಕಾರ್ಯಪಾಲಕ ಅಭಿಯಂತರರು, ಕೆರೆಗಳ ವಿಭಾಗ ಬಿಬಿಎಂಪಿ.
13. ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ ಬಿಬಿಎಂಪಿ.
14. ತೋಟಗಾರಿಕೆ ಅಧೀಕ್ಷಕರು, ಬೊಮ್ಮನಹಳ್ಳಿ ವಲಯ.
15. ಆರೋಗ್ಯ ವೈದ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
16. ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ.
17. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣಾ ವಿಭಾಗ.
18. ಸಹಾಯಕ ಕಂದಾಯ ಅಧಿಕಾರಿ ಅಂಜನಾಪುರ ವಿಭಾಗ.
19. ಕಲ್ಯಾಣಾಧಿಕಾರಿಗಳು ಬೊಮ್ಮನಹಳ್ಳಿ ವಲಯ.
20. ಉಪವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
21. ಪೋಲೀಸ್ ಇನ್ಸ್‌ಪೆಕ್ಟರ್, ಹುಳಿಮಾವು ಮತ್ತು ಕೋಣನಕುಂಟೆ ಪೋಲೀಸ್ ಠಾಣೆ.
22. ಕಂದಾಯ ಅಧಿಕಾರಿಗಳು, ಅಂಜನಾಪುರ ಉಪ ವಲಯ.
23. ಸ್ಥಳೀಯ ನಾಗರಿಕ ಕಲ್ಯಾಣ ಸಂಸ್ಥೆಗಳು.

Scanned with CamScanner